MYSORE MINISTERS SALARIES AND ALLOWANCES (AMENDMENT) BILL, 1967.

Sri SIDDIAH KASHIMATH. – Sir, I beg leave of the House to introduce the Mysore Ministers Salaries and Allowances (Amendment) Bill, 1967.

Sri K. H. PATIL (Gadag).—Sir, shall I raise the same point of order on this Bill which we raised on the previous Bill or shall I raise the point of order on this Bill in a separate form ?

Mr. SPEAKER.—I do not understand how they can be repeated.

†ಶ್ರೀ ಎಸ್. ಶಿವಪ್ಪ.—ಒಂದು ಕ್ರಿಯಾಲೋಪ, ಸ್ವಾಮಿ ಸಿದ್ದಯ್ಯ ಕಾಶೀಮಠ ಅವರು ಶಾಸಕರ ಸಂಬಳ ಏರಿಕೆಯ ಬಗ್ಗೆ ಮಂಡಿಸಿದ ಮಸೂದೆ ಕುರಿತು ಅವರು ಕೊಟ್ಟಂಥ ಕಾರಣಗಳು, ನಾನು ಒಬ್ಬ ಶಾಸಕನಾಗಿದ್ದುದರಿಂದ ಅದು ನನಗೂ ಸಂಬಂಧಪಟ್ಟದ್ದು ಆಗಿದೆ. ನನಗೆ ಇರತಕ್ಕ ಸಂಬಳ ಸಾಕಾಗುವುದಿಲ್ಲ ಎಂದು ಕಾರಣ ಕೊಟ್ಟು ಈ ಮಸೂದೆ ಅವರು ತಂದಿದ್ದಾರೆ. ಆದರೆ ಮಂತ್ರಿಗಳಿಗೆ ಸಂಬಂಧಪಟ್ಟ ಸಂಬಳ ಏರಿಕೆ ಮಸೂದೆಯನ್ನು ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸದೇ ಇರುವಾಗ, ಇವರಿಗೆ, ಮಂಡಿಸುವುದಕ್ಕೆ ಕಾನೂನು ಬದ್ಧವಾಗಿ ಅಥವಾ ಯಾವುದೇ ನೀತಿಗೆ ಬದ್ಧವಾಗಿ ಅಧಿಕಾರ ಇರುವುದಿಲ್ಲ. ಮಂತ್ರಿಗಳ ಪರವಾಗಿ ವಾದ ಮಾಡಿ ಅವರ ಸಂಬಳ ಜಾಸ್ತಿ ಮಾಡುವುದಕ್ಕೆ ಇವರಿಗೆ ಏನೇನೂ ಸಂಬಂಧವಿಲ್ಲ. ತಮ್ಮ ಪರವಾಗಿ ವಾದ ಮಾಡುವುದ ಕ್ಕಾಗಿ ಒಬ್ಬ ಸದಸ್ಯರನ್ನು ಅವರು ಎತ್ತಿ ಕಟ್ಟಿ ಈ ಮಸೂದೆ ಮಂಡಿಸುವ ಪ್ರಯೋದನೆಯ ನೀತಿ ಇದರಲ್ಲಿ ಕಾಣಿಸುತ್ತದೆ. ಈ ಮಸೂದೆಯನ್ನು ಶ್ರೀಮಾನ್ ಸಿದ್ದಯ್ಯ ಕಾಶೀಮಠ ಅವರು ಮಂಡಿ ಸುವುದರ ಬದಲು ಮಂತ್ರಿಗಳು ಇದನ್ನು ಮಂಡಿಸಬಹುದಾಗಿತ್ತು. ಶ್ರೀಮಾನ್ ಸಿದ್ದಯ ಕಾಶೀಮಠ ಅವರು ತಮಗೆ ಬರತಕ್ಕಂಥ ಸಂಬಳ ಸಾಕಾಗುವುದಿಲ್ಲ ಎಂದು ತಮ್ಮ ಸಂಬಳ ಜಾಸ್ತಿ ಮಾಡು ವುದಕ್ಕೆ ಕೇಳಬಹುದು. ಆದರೆ ಅವರು ಮಂತ್ರಿಗಳ ಸಂಬಳ ಅವರ ಖರ್ಚಿಗೆ ಸಾಕಾಗುವುದಿಲ್ಲ ಸಂಬಳ ಜಾಸ್ತಿಕೊಡಿ ಎಂದು ಕೇಳಲು ಅವರಿಗೆ ಬರಲಾರದು. ಮಂತ್ರಿಗಳಿಂದ ಇಂಥ ಮಸೂದೆ ಸಭೆಯ ಮುಂದೆ ಬರಲಿ. ಅಂಥ ಮಸೂದೆ ಮಂಡನೆ ಮಾಡಿದರೆ ವಿಚಾರ ಮಾಡಬಹುದು. ಆದರೆ ಶ್ರೀಮಾನ್ ಸಿದ್ದಯ್ಯ ಕಾಶೀಮಠ ಅವರು ಮಂತ್ರಿಗಳ ಪರವಾಗಿ ಕಾನೂನು ಮಾಡುವುದಕ್ಕೆ ಮಸೂದೆ ಮಂಡಿಸುವುದು ನ್ಯಾಯ ಬದ್ಧವಲ್ಲ. ಈ ರೀತಿ ಮಾಡುವುದಕ್ಕೆ ಅವಕಾಶ ಕೊಡಬಾರದು ಎಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ.

Mr. SPEAKER.—I am really surpised at the Leader of the Opposition raising such a point of order. He may or may not oppose ; I am not concerned with it.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಶಿರಹಟ್ಟಿ ಸದಸ್ಯರು ಈ ಮಾನ್ಯ ಸಭೆಯ ಮುಂದೆ ಮತ್ತೊಂದು ಮಸೂದೆಯನ್ನು ಮಂಡಿಸಬೇಕು ಎಂದು ಅವಕಾಶ ಕೇಳಿದರು ಅದಕ್ಕೆ ಅವಕಾಶ ಕೊಡಬಾರದು ಎಂದು ನಾನು ತಿಳಿಸಬಯಸುತ್ತೇನೆ. ಮತ್ತು ಈ ಮಸೂದೆ ಯನ್ನು ಇಂಟ್ರಡ್ಯೂಸ್ ಮಾಡುವುದನ್ನು ಸಭೆಯ ಮುಂದೆ ಮಂಡಿಸುವುದನ್ನು ನಾನು ವಿರೋಧಿಸು ತ್ತೇನೆ.

Mr. SPEAKER.—The Question is :

"That leave be granted, to Sri Siddaiah Kasimath to introduce the Mysore Minister's Salaries and Allowances (Amendment) Bill, 1967."

3-00 P.M.

†ಶ್ರೀ ಸಿದ್ಧಯ್ಯ ಕಾಶಿಮಠ.—ಅಧ್ಯಕ್ಷರೇ, ಈ ಮಂತ್ರಿಗಳ ಬಗ್ಗೆ ಇರತಕ್ಕ ಪಗಾರ ಹಾಗೂ ಆಶ್ರಯನ್ನ ಹೆಚ್ಚಿಸಿರುವುದರ ಬಗ್ಗೆ ತಂದ, ಈ ಮಸೂದೆಯನ್ನು ಸಭೆಯವರು ಒಪ್ಪಬೇಕು ಎನ್ನುವುದನ್ನು ನಾನು ಈ ಸಭೆಯ ಮುಂದೆ ಇಟ್ಟಿದ್ದೇನೆ. ನಾನು ತಿಳಿದುಕೊಂಡಿರುವ ಹಾಗೆ ನನ್ನ

ಸ್ನೇಹಿತರು ನನ್ನ ಮೇಲೆ ಅಪಾರ್ಥ ತಿಳಿದುಕೊಂಡಿದ್ದಾರೆ ಕಾಂಗ್ರೆಸ್ಸಿನವರ ಚಿತಾವಣೆಯಿಂದ ನಾನು ಇದನ್ನು ಮಾಡುತ್ತಿದ್ದೇನೆ ಎಂದು ಹೇಳುತ್ತಿದ್ದಾರೆ. ನಾನಾದರೂ ಹೇಳುತ್ತಿದ್ದೇನೆ, ಈ ಮನೆಯ ಯಾವುದೇ ಸದಸ್ಯ, ಕಾಂಗ್ರೆಸ್ಸಿನವರಿಗೆ ಸಂಬಂಧಪಟ್ಟಿರಲಿ, ನಾನ್ ಗೆಜೆಟೆಡ್ ನೌಕರರಿಗೆ ಸಂಬಂಧಪಟ್ಟ ವಿಷಯವಾಗಿರಲೀ, ಅದು ಆರ್ಥಿಕಕ್ಕೆ ಸಂಬಂಧಿಸಿರಲಿ, ಕಾರ್ಯನಿರೂಪಣೆಯಾಗಿರತಕ್ಕ ಒಂದು ಕಾನೂನು ಇರಲಿ ಅವುಗಳನ್ನು ಸದಸ್ಯರು ತರತಕ್ಕುದು ಒಂದು ಹಕ್ಕು. ಅದೇ ರೀತಿಯಾಗಿ ಈ ಸಭೆಯ ಸದಸ್ಯರೆಲ್ಲರೂ ಕೂಡ ಒಪ್ಪಿಗೆ ಕೊಟ್ಟ ನಂತರ, ಈ ಸಭೆಯಲ್ಲಿ ಪಾಸಾದ ನಂತರ ಅದನ್ನು ಅಮಲಿನಲ್ಲಿ ತರತಕ್ಕದು ಈ ಸಭೆಯ ನಿಯಮಗಳಿಗನುಸಾರವಾಗಿ ಇದೆ. ನಾನು ನಾರ್ಥಾರು ಕಡೆಗಳಲ್ಲಿ ಎಂದರೆ ಮಹಾರಾಷ್ಟ್ರದಲ್ಲಿ, ಆಂಧ್ರದಲ್ಲಿ, ಮದ್ರಾಸಿನಲ್ಲಿ ತಿರುಗಾಡಿ ನೋಡಿದಾಗ ನನಗನ್ನಿಸುತ್ತದೆ ಸ್ವಾತಂತ್ರ್ಯ ಬಂದ ಮೇಲೆ ಮುಖ್ಯವಾಗಿ 1952ನೇ ಇಸವಿಯಲ್ಲಿ ಸಾರ್ವಜನಿಕ ಪ್ರತಿನಿಧಿಗಳಾಗಿ ಬಂದ ಮೇಲೆ ನಮಗೆ ಮತ್ತು ಅಲ್ಲಿರತಕ್ಕ ಸದಸ್ಯರಿಗೆ ಕೊಡತಕ್ಕ ಪಗಾರ, ಮಂತ್ರಿಗಳಿಗೆ ಕೊಡತಕ್ಕ ಪಗಾರ ಬಹಳ ಕಡಮೆ ಇದೆ. ಪೊನ್ನೆ ತಾನೇ ಮುಂಬೈನಲ್ಲಿ ಕೂಡ ಹೆಚ್ಚಿಗೆ ಮಾಡಿರತಕ್ಕುದು ಮತ್ತು ಉಳಿದ ದೇಶಗಳಲ್ಲಿ ಕೂಡ ಹೆಚ್ಚು ಮಾಡಿರತಕ್ಕದ್ದು ನಮ್ಮ ಕಣ್ಣು ಮುಂದೆ ಇದೆ. ಮಧ್ಯ ಪ್ರದೇಶದಲ್ಲಿ ಕೂಡ ಹೆಚ್ಚಾಗಿರುತ್ತದೆ. ಶಾಸಕರಿಗೆ ಅಷ್ಟೇ ಅಲ್ಲ, ಶಾಸಕರಿಂದ ಮಂತ್ರಿಗಳಿಗೂ ಕೂಡ ಕಾಲಕ್ಕೆ ಅನುಗುಣವಾಗಿ ತಮ್ಮ ಗೌರವವನ್ನು ಉಳಿಸಿಕೊಳ್ಳುವುದಕ್ಕಾಗಿ ಗೌರವಯುತವಾಗಿ ಬಾಳಬೇಕಾದರೆ ಪಗಾರ ಹೆಚ್ಚಾಗಬೇಕು ಎನ್ನುವುದು ಅಲ್ಲಲ್ಲಿ ನೋಡಿದಾಗ ನನಗನ್ನಿಸಿತು. ಈ ಸಭೆಯ ಸದಸ್ಯರಿಗೇ ಅಲ್ಲದೆ ಮಂತ್ರಿಗಳಿಗೂ ಕೂಡ ಕೊಡತಕ್ಕುದು ಬಹಳ ಕಡಮೆ, ಈ ಒಂದು ವಿಷಯ ತಮ್ಮ ಮುಂದೆ ಹೇಳಬಯಸುತ್ತೇನೆ.

1952ನೆ ಇಸವಿಯಲ್ಲಿ ಮೈಸೂರಿನ ಮಂತ್ರಿಮಂಡಲದಲ್ಲಿರತಕ್ಕವರಿಗೆ ಎಂಥ ಅವಕಾಶವನ್ನು ಕೊಟ್ಟಿದ್ದರು ಎಂದರೆ ಮಂತ್ರಿಗಳಾದವರಿಗೆ ಬೆಂಗಳೂರಿನಲ್ಲಿ ಒಂದು ವೆರ್ ಫರ್ನಿಷ್ಡ್ ಉಚಿತವಾದ ಮನೆ. ಅದೇ ರೀತಿಯಾಗಿ ಮೈಸೂರಿನಲ್ಲಿಯೂ ಕೂಡ ಒಂದು ವೆರ್ ಫರ್ನಿಷ್ಡ್ ಉಚಿತವಾದ ಮನೆ ಕೊಡತಕ್ಕ ಸಂಪ್ರದಾಯವಿತ್ತು. ಹಿಂದೆ ಈ ಮಾನ್ಯ ಸಭೆಯ ಸದಸ್ಯರಾಗಿದ್ದ ಶ್ರೀಮಾನ್ ಗರ್ಜೆ ಮರುಳಪ್ಪನವರು ಒಮ್ಮೆ ಹೇಳುತ್ತಿದ್ದರು, ಏನೆಂದರೆ ಅವರಿಗೆ ಸ್ವೇಚ್ಛೆಯಾಗಿ ಎರಡು ಮನೆಗಳನ್ನು ಕೊಡುವುದೂ ಅಲ್ಲದೆ.....

Mr. SPEAKER.—Would the House like to have a break for half-an-hour ?

HON'BLE MEMBERS.—Yes.

Mr. SPEAKER.—The House will now stand adjourned for half-an-hour.

The House adjourned at Five Minutes past Three of the Clock and re-assembled at Thirty-five Minutes past Three of the Clock.

[Mr. SPEAKER in the Chair]

ಶ್ರೀ ಸಿದ್ದಯ್ಯ ಕಾಶೀಮಠ.—ಹಿಂದೆ ಮುರುಳಪ್ಪನವರು ಹೀಗೆ ಹೇಳುತ್ತಿದ್ದರು. ಹಿಂದಿದ್ದ ಮಂತ್ರಿಗಳಿಗೆ ಮೈಸೂರು ಮತ್ತು ಬೆಂಗಳೂರುಗಳಲ್ಲಿ ವೆರ್ ಫರ್ನಿಷ್ಡ್ ಹೌಸನ್ ಕೊಡುತ್ತಿದ್ದರು, ಅವರಿಗೆ ಕೋಟು ಹಾಕುವುದಕ್ಕೆ ಒಬ್ಬ ಸಿಪಾಯಿ, ಕಾಲುಚೀಲ ತೊಡಿಸುವುದಕ್ಕೆ ಒಬ್ಬ ಸಿಪಾಯಿ, ಬೂಟ್ ಹಾಕುವುದಕ್ಕೆ ಒಬ್ಬ ಸಿಪಾಯಿ ಹೀಗೆ ನೇಮಕ ಮಾಡುವ ಪರಿಪಾಠವಿತ್ತು .....

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಹುಲಿಯೂರುದುರ್ಗ).—ಪಾಯಿಂಟ್ ಆಫ್ ಅರ್ಡರ್ ಸರ್. ಈ ಸಭೆಯಲ್ಲಿ ಹಾಜರಿಲ್ಲದಿರುವವರ ಬಗ್ಗೆ ಕಾಲು ಚೀಲ ಹಾಕುವುದಕ್ಕೆ ಒಬ್ಬ ಸಿಪಾಯಿ, ಬೂಟ್ಸ್ ಹಾಕಲು ಒಬ್ಬ ಸಿಪಾಯಿ ಹೀಗೆಲ್ಲಾ ಅವರಿಗಾಗಿ (ಅಂದರೆ ಮಂತ್ರಿಗಳಿಗಾಗಿ) ಜನರನ್ನು ನೇಮಕ ಮಾಡುತ್ತಿದ್ದರು ಎಂದು ಹೇಳುವುದು, ಈ ರೀತಿ ಮಾತನಾಡುವುದು ಸೂಕ್ತವಲ್ಲ ಎಂಬುದು ನನ್ನ ಭಾವನೆ.

Mr. SPEAKER.—A Point of Order has been raised by Sri N. Huchmasthy Gowda that the Hon'ble Member Sri Siddaiah Kashimath, in the course of what he was mentioning to the House in support of the Motion, has made reference to the previous Ministers or the Ministers in the previous Cabinet or in the prior Government. I do not know, whether it means prior to independence.

Sri N. HUCHMASTHY GOWDA.—Sir, it is in 1952.

Mr. SPEAKER.—Five years after Independence, and such references though they are not made against any individual and perhaps generally against the generic class of Ministers, are not desirable or proper, and, therefore, he wants me to give a Ruling on the point as to whether it is in order or not. He also reinforced his argument by saying that those Ministers are not here. I do not have any Ministers particularly in my mind. Those that are out of office and still happily with us are not here; those that are not with us at all can never come. Therefore, it is a greater duty on our part to avoid references which might cast reflections. It is enough to say that in the prior years the Council of Ministers or the individual Ministers were having greater facilities under this or that head. But, certainly it is unparliamentary and insinuations should not be made.

ಶ್ರೀ ಸಿದ್ದಯ್ಯ ಕಾಶೀಮಠ.—ಆದುದರಿಂದ ನಾನಾವರೂ ಹೇಳುವುದು ಇಷ್ಟು. ನಮ್ಮಂತಹ ಸದಸ್ಯರುಗಳಿಗೇ ತೊಂದರೆಗಳಿರುವಂತೆ ಮಂತ್ರಿಗಳಿಗೂ ಕೂಡ ಇದೆ. ಮಂತ್ರಿಗಳೂ ಕೂಡ ಒಳ್ಳೆಯ ರೀತಿಯಿಂದ ಜನ ಸೇವೆಗೆ ಸಿದ್ಧರಾಗಿರಬೇಕು. ಅವರೂ ಗೌರವಯುತವಾಗಿ ಜೀವಿಸಬೇಕು.

ಶ್ರೀ ಕೆ. ಪಿ. ನಾಡಗೌಡ (ಮೂಥೊಳ).—ನನ್ನದೊಂದು ಪಾಯಿಂಟ್ ಆಫ್ ಆರ್ಡರಿದೆ.

ಮಂತ್ರಿಗಳು ಒಳ್ಳೆಯ ರೀತಿಯಿಂದ ಕೆಲಸ ಮಾಡುವ ಉದ್ದೇಶದಿಂದ ಎಂದು ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದಯ್ಯ ಕಾಶೀಮಠರವರು ಇಲ್ಲಿ ಹೇಳಿದರು. ಈಗಾಗಲೇ ಇರುವ ಮಂತ್ರಿಗಳು ಒಳ್ಳೆಯ ಹಾಗೂ ಯೋಗ್ಯನಾದ ಕೆಲಸಮಾಡುತ್ತಿಲ್ಲ ಎಂದು ಅವರ ಅರ್ಥವೋ? ಇದರ ಬಗ್ಗೆ ತಮ್ಮ ರೂಲಿಂಗ್ ಬಯಸುತ್ತೇನೆ.

Mr. SPEAKER.—Mr. K. P. Nadgouda has raised a point of order. It refers to a matter on which there is divergence of opinion. Members in the Opposition always feel and are frequently feeling that the Ministers are not doing their duty properly. Some others feel they are discharging their duties properly. There is divergence of opinion. Therefore, I cannot up-hold this point of order.

ಶ್ರೀ ಸಿದ್ದಯ್ಯ ಕಾಶೀಮಠ.—ಅವರು ಗೌರವಯುತವಾಗಿ ಜೀವನ ನಡೆಸಬೇಕು ಎನ್ನುವ ದೃಷ್ಟಿಯಿಂದ ಈ ಬಿಲ್ಲನ್ನು ತಂದಿರುವುದರಿಂದ ಈ ಬಿಲ್ಲನ್ನು ತರುವುದಕ್ಕೆ ಮಾನ್ಯ ಸಭೆಯವರು ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಶಿರಹಟ್ಟಿ ಕ್ಷೇತ್ರದ ಮಾನ್ಯ ಸದಸ್ಯರು ತಾವು ಯಾವ ಉದ್ದೇಶದಿಂದ ಸಚಿವರ ಸಂಬಳ ಮತ್ತು ಭತ್ಯಗಳನ್ನು ಹೆಚ್ಚಿಸುವುದರ ಬಗ್ಗೆ ಈ ಮುನೂದೆಯನ್ನು ಈ ಮಾನ್ಯ ಸಭೆಯ ಮುಂದೆ ಮಂಡಿಸುವುದಕ್ಕೆ ಅವಕಾಶ ಕೊಡಬೇಕು ಎಂದು ತಿಳಿಸಿದ್ದಾರೆ. ಮಾನ್ಯ ಶಿರಹಟ್ಟಿ ಸದಸ್ಯರಿಗೆ ಈ ಮುನೂದೆಯನ್ನು ಮಾನ್ಯ ಸಭೆಯ ಮುಂದೆ ಮಂಡಿಸುವುದಕ್ಕೆ ಅವಕಾಶ ಕೊಡಬಾರದು ಎಂದು ಹೇಳುವುದಕ್ಕಾಗಿ ನಾನು ಇಲ್ಲಿ ನಿಂತಿದ್ದೇನೆ.

ಸ್ವಾಮೀ, ಈಗತಾನೇ ರಾಜ್ಯದ ಶಾಸಕರುಗಳ, ವಿಧಾನ ಸಭಾಧ್ಯಕ್ಷರ ಹಾಗೂ ಉಪಾಧ್ಯಕ್ಷರ, ಮತ್ತು ಮೇಲ್ಮನೆಯ ಸಭಾಪತಿಯವರ ಹಾಗೂ ಉಪ ಸಭಾಪತಿಯವರ ಹಾಗೂ ಸದಸ್ಯರುಗಳ ಸಂಬಳ ಸಾರಿಗೆಗಳು ಹಾಗೂ ಮತ್ತಿತರ ಸೌಲಭ್ಯಗಳನ್ನು ಹೆಚ್ಚು ಮಾಡಬೇಕು ಎನ್ನುವ ಬಗ್ಗೆ ಮಾನ್ಯ

ಸದಸ್ಯರು ಈ ಸಭೆಯ ಮುಂದೆ ಇಂತಹುದೇ ಒಂದು ಮಸೂದೆಯನ್ನು ಮಂಡಿಸುವುದಕ್ಕೆ ಅವಕಾಶ ಪಡೆದುಕೊಳ್ಳುವುದಕ್ಕೆ ಅನೇಕ ರೀತಿಯ ವಿರೋಧಗಳ ನಂತರ ಈ ಮಾನ್ಯ ಸಭೆಯಲ್ಲಿ ಮತವನ್ನು ಪಡೆದು ಅವಕಾಶವನ್ನು ಪಡೆದುಕೊಂಡಿದ್ದಾರೆ. ಈ ವಿರೋಧ ಸಾಲದೇನೋ ಎನ್ನುವುದನ್ನು ಪರೀಕ್ಷೆ ಮಾಡುವುದಕ್ಕಾಗಿ ಇಂತಹುದೇ ಮತ್ತೊಂದು ಮಸೂದೆಯನ್ನು ನಾನು ಮಂಡಿಸುತ್ತಿದ್ದೇನೆ ಎಂದು ಮಾನ್ಯ ಸದಸ್ಯರು ಹೊರಟಿದ್ದಾರೆ.

ಸ್ವಾಮೀ, ನಮ್ಮ ಸಭೆಯ ನಡವಳಿಕೆಗಳಲ್ಲಿ ಆಚರಿಸತಕ್ಕ ನಿಯಮಾವಳಿಗಳ ಪ್ರಕಾರ ರಾಜ್ಯಾಂಗ ನಮಗೆ ಕೊಟ್ಟಿರತಕ್ಕ ಅವಕಾಶದ ಪ್ರಕಾರ ಈ ಮನೆಯಲ್ಲಿ ಯಾವುದೇ ಸದಸ್ಯರು ಯಾವುದೇ ಒಂದು ಮಸೂದೆಯನ್ನು ಅಧ್ಯಕ್ಷರ ಅನುಮತಿ ಪಡೆದು, ಕೆಲವು ಸನ್ನಿವೇಶಗಳಲ್ಲಿ ರಾಜ್ಯಪಾಲರ ಮತ್ತು ರಾಷ್ಟ್ರಾಧ್ಯಕ್ಷರ ಅನುಮತಿ ಪಡೆದು ಮಂಡಿಸುವುದಕ್ಕೆ ಹಕ್ಕನ್ನು ಪಡೆದಿರುತ್ತಾರೆ. ಈ ಒಂದು ಹಕ್ಕನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಕೆಲವು ಸಲ ಕಾನೂನು ಕುರುಡಾಗಿರುತ್ತದೆ. ಯಾರಾದರು ಈ ವಿಧಾನ ಸೌಧವನ್ನು ನನ್ನದು ಇದು, ಇವರಿಗೆ ಮಾರಾಟ ಮಾಡುವುದಕ್ಕಾಗಿ ರಿಜಿಸ್ಟರು ಮಾಡಿಸು ಎಂದರೆ ರಿಜಿಸ್ಟ್ರಾರ್‌ರವರು ಹೇಗೆ ರಿಜಿಸ್ಟರು ಮಾಡಬಹುದೋ ಹಾಗಾಗಿದೆ ಈ ಮಸೂದೆ. ಇದರಲ್ಲಿ ಏನಾದರೂ ಇರಲಿ, ಇದನ್ನು ಈ ಸಭೆಯ ಮುಂದೆ ಮಾನ್ಯ ಸದಸ್ಯರು ಮಂಡಿಸುವುದಕ್ಕೆ ಅವಕಾಶ ಬೇಕು ಎನ್ನುವುದು ಒಂದು ವಿಷಯ. ಇತಿ ಮಿತಿಗಳನ್ನು ನೋಡಿಕೊಂಡು ಕಾನೂನು, ನೀತಿ, ಇವೆ ರಡು ವಿಷಯಗಳು ಎಂದು ತಾವು ಆಗಲೇ ಹೇಳಿದ್ದೀರಿ. ಕೆಲವು ಸಂದರ್ಭಗಳಲ್ಲಿ ನೀತಿ ಬೇರೆ ಯಾಗಿರುವಕಾನೂನನ್ನೂ ಮಾಡಬೇಕಾಗುತ್ತದೆ. ಕಾನೂನು ಸಾಮಾನ್ಯವಾಗಿ ನೀತಿಯನ್ನು ಅನು ಸರಿಸದೇ ನೀತಿಬಾಹಿರವಾದ ಕಾನೂನಾಗಿ ಎಷ್ಟೊರಮಟ್ಟಿನ ಜನಮನ್ನಣೆಪಡೆಯುತ್ತದೆ ಎನ್ನುವುದು ವಿವಾದಾಸ್ಪದವಾದ ವಿಷಯ. ಹಿಂದೆ ಶ್ರೀಮಂತನಾಗಿದ್ದವನು ಇಂದು ನೀತಿಬಾಹಿರ ಎಂದು ಹೇಳಿದರೆ ತಮಗೂ ನಿಜವಾಗಿ ನಗು ಬಂದಿರಬೇಕು.

ಅಧ್ಯಕ್ಷರು.—ಯಾರಿಗೆ ನಗು ?

ಶ್ರೀ ಎಸ್. ಗೋಪಾಲಗೌಡ.—ನೀತಿವಂತನೇ ಮಸೂದೆಗಳನ್ನು ಮಂಡಿಸಬೇಕು ಎಂದು ಹೇಳಿದರೆ ನಾವೆಲ್ಲರೂ ನೀತಿವಂತರೇ, ಮಸೂದೆಗಳನ್ನು ಮಂಡಿಸುವಾಗ ನೀತಿಯುತವಾದ ಮಸೂದೆ ಗಳನ್ನು ಮಂಡಿಸಬೇಕು ಅನೀತಿಯುತವಾದ ಮಸೂದೆಗಳನ್ನು ಮಂಡಿಸಬಾರದು ಎಂದು ಹೇಳುವು ದಕ್ಕೆ ತಾವು ಏನು ಏಥಿಕ್ಸ್ ಎಂದರೆ ಧರ್ಮ ಎಂದುಹೇಳುತ್ತೀರಿ ಅದು, ಅದರ ಬಗ್ಗೆ ಇಲ್ಲಿ ಇನ್ನು ಹೇಳುವುದಿಲ್ಲ. ಸಾಮಾನ್ಯವಾಗಿ ಮೊದಲಿಂದಲೂ ನೀತಿಯ ಪ್ರಶ್ನೆ ಬಂದಾಗ ತಾವು ಅದರಂತೆ ನಿರ್ಣಯಮಾಡುವುದಕ್ಕೆ ಅಸಮರ್ಥರಾಗಿದ್ದೀರಿ. ಕಾನೂನು ದೃಷ್ಟಿಯಿಂದ ನಿಯಮಾವಳಿಗಳಲ್ಲಿ ನೀತಿ ಬೋಧೆ ಪಾಠ ಇಲ್ಲವೇ ಇಲ್ಲ. ಪಾವಗಡದ ಸದಸ್ಯರು ಇಲ್ಲಿ ಬಹಳ ಲವಲವಿಕೆಯಿಂದ ಇಂದು ಇದ್ದಾರೆ.

ಸ್ವಾಮೀ, ನಾನು ಇಲ್ಲಿ ಕಾನೂನು ಮತ್ತು ನೀತಿ ಇವುಗಳ ವ್ಯಾಖ್ಯಾನ ಅಥವಾ ಪರಿಭಾಷೆ ಮಾಡುವುದಕ್ಕೆ ಹೋಗುವುದಿಲ್ಲ. ಇದೇ ಮಾನ್ಯ ಸದಸ್ಯರು ತಮ್ಮ ಸಂಬಳಸಾರಿಗೆಗಳ ಬಗ್ಗೆ ಮಾತ ನಾಡುತ್ತಾ ತಮಗೆ ವೈಯ್ಯಕ್ತಿಕವಾಗಿ ಆಗಿರುವ ಕಷ್ಟಸುಖಗಳನ್ನು ಈ ಸಭೆಯ ಮುಂದೆ ಇಟ್ಟು ಬಹಳ ತೊಂದರೆ ಇದೆ, ಬೆಲೆಗಳು ಏರುತ್ತಿವೆ ಎನ್ನುವ ನೆಪದಿಂದ ಈಗ ಪಡೆಯುತ್ತಿರುವ ಸಂಬಳ ಮತ್ತು ಭತ್ಯಗಳು ಏನೇನೂ ಸಾಲದು, ಆದುದರಿಂದ ನಾವು ಇದನ್ನು ಒಪ್ಪಿಕೊಳ್ಳಲೇಬೇಕು ಎನ್ನುವ ತಮ್ಮ ವಾದವನ್ನು ಮುಂದಿಟ್ಟರು. ಆದರೆ ಅವರ ವಾದ ಇಷ್ಟಕ್ಕೇ ಮುಗಿಯಲಿಲ್ಲ. ನಮ್ಮ ಎದುರಿನಲ್ಲಿ ಕುಳಿತಿರತಕ್ಕ ಮಂತ್ರಿಗಳ ಹಾಗೂ ಉಪ ಮಂತ್ರಿಗಳ ಸಂಬಳಸಾರಿಗೆಗಳನ್ನೂ ಹೆಚ್ಚಿಸದೇ ಹೋದರೆ ನಮ್ಮ ಗೌರವ ರೋಷಪಾಗುತ್ತೋ ಏನೋ ಎಂದು ಹೇಳಿದರು. ಅವರಿಗೂ ಕಷ್ಟ ಪಾಪ ! ಕೇವಲ ತಿಂಗಳಿಗೆ 900 ರೂಪಾಯಿಗಳಷ್ಟು ಸಂಬಳ 250 ರೂಪಾಯಿಗಳಷ್ಟು ಮನೆ ಬಾಡಿಗೆ, 30 ರೂಪಾಯಿಗಳಷ್ಟು ಎಲೆಕ್ಟ್ರಿಸಿಟಿ ಖರ್ಚು ಇಷ್ಟರಲ್ಲಿ ಜೀವನ ಮಾಡುವುದಕ್ಕೆ ಕಷ್ಟ ! ಅವರವರ ಸ್ಥಾನ ಮಾನದ ಮೇಲೆ ಸುಮಾರು ಹತ್ತು ಇಪ್ಪತ್ತು ಸಾವಿರಗಳ ವೇತನ ಇತ್ಯಾದಿಗಳನ್ನು ಕೊಡಬೇಕೆಂದು ಮಾಡುವುದು ಕಷ್ಟ. ನಮ್ಮ ಮಾನ್ಯ ಸಭೆಯಲ್ಲಿರುವ ಮಂತ್ರಿಗಳೂ ಕೂಡ ಬಡತನದಿಂದ ತುಂಬ ಕಾಷ್ಟಾ ವ್ಯಸನಗಳಿಗೆ ಸಿಕ್ಕಿ ಜನಕ್ಕೆ ಬಹಳ ಒಳ್ಳೆಯ ಸೇವೆಯನ್ನು ಮಾಡುವುದೆಂದರೆ ಕಷ್ಟ. ಅವರ ಗೌರವಕ್ಕೆ ತಕ್ಕಂತೆ ಅವರು ಇರಬೇಕು ಎನ್ನುವ ಉದ್ದೇಶದಿಂದ ಈ ಮಸೂದೆ ತರಬೇಕೆಂದು ಹೇಳಿ ದ್ದಾರೆ. ಮಹಾತ್ಮಾ ಗಾಂಧಿಯವರ ಪರಮ ಶಿಷ್ಯರಾದ ಮಾನ್ಯ ಶ್ರೀಮಾನ್ ಕಂಠಿಯವರು ಬಹಳ ತ್ಯಾಗ, ಸೇವೆ ಮಾಡಿದವರು. ಅವರು ದೇಶಕ್ಕಾಗಿ ಜೀವವನ್ನು ಗಂಧದ ಕೊರಡು ತೇಯುವಂತೆ ಜೀವವನ್ನು ಸವೆಸಿ ಅವರೂ ಬಹಳ ಸೆಣಕಲಾಗಿ ಬಿಟ್ಟಿದ್ದಾರೆ. ಅಂತಹವರಿಗೆ ಬೇಕಾದ ಪರಿಹಾರ ಗಳನ್ನೂ ಕೊಡಬೇಕಾದುದೇ.

ಶ್ರೀ ಎಸ್. ಆರ್. ಕಂಠಿ (ನ್ಯಾಯಶಾಖೆಯ ಮಂತ್ರಿಗಳು)—ಪರ್ಸನಲ್ ರೆಫೆರನ್ಸ್ ಎಕ್ಸ್‌ಪಂಜ್ ಮಾಡಬೇಕು. ಅವರು ಕೋಪದಲ್ಲಿ ಮಾತನಾಡುತ್ತಿದ್ದಾರೆ. ದಯವಿಟ್ಟು ಅದನ್ನು ತೆಗೆಸಿಹಾಕ ಬೇಕು.

ಶ್ರೀ ಎಸ್. ಗೋಪಾಲಗೌಡ.—ಒಳ್ಳೆಯ ರೀತಿಯಲ್ಲಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದೇವೆ. ತಾವು ಅದನ್ನು ಸ್ವೀಕರಿಸಬೇಕು ಎಂದು ಹೇಳುತ್ತೇನೆ.

Mr. SPEAKER.—That is not the point covered by the Bill. I want to adhere to the Bill and not make any personal reference.

ಶ್ರೀ ಎಸ್. ಗೋಪಾಲಗೌಡ.—ಅವರ ಕಷ್ಟಸುಖಗಳನ್ನು ನಿವಾರಣೆ ಮಾಡಬೇಕು. ಅದ ಕ್ಕೋಸ್ಕರ 300 ರೂಪಾಯಿ ಸಂಬಳ ಹೆಚ್ಚಿಸಬೇಕು.

Mr. SPEAKER.—Where does the personality come in?

ಶ್ರೀ ಎಸ್. ಗೋಪಾಲಗೌಡ.—ಇಬ್ಬರು ಸಚಿವರು ಇದ್ದಾರೆ. ಅದರಲ್ಲಿ ಒಬ್ಬರನ್ನು ಆರಿಸಿ ಕೊಂಡೆ. ಮಾನ್ಯ ಶ್ರೀಮಾನ್ ಕಂಠಿಯವರು ಹೆಚ್ಚು ತ್ಯಾಗಮಾಡಿದವರು. ಕ್ಷಮಿಸಬೇಕು. ತಪ್ಪು ಎಂದರೆ ವಾಪಸ್ಸು ತೆಗೆದುಕೊಳ್ಳುವುಕ್ಕೆ ಸಿದ್ಧವಾಗಿದ್ದೇನೆ. ಸ್ವಾಮಿ, ಸಂಬಳ ಸಾರಿಗೆಗಳು ಹೆಚ್ಚಿಸಿಕೊಳ್ಳಬೇಕಾದ ವಿಷಯ ನಮ್ಮ ಮುಂದೆ ಇದೆ. ದೇಶದಲ್ಲಿ ಆಹಾರ ವಸ್ತುಗಳ ಬೆಲೆ ಏರಿದೆ, ಅಗತ್ಯ ವಸ್ತುಗಳ ಬೆಲೆ ಏರಿದೆ, ಮನೆ ಬಾಡಿಗೆ ಏರಿದೆ, ವಿದ್ಯುಚ್ಛಕ್ತಿ ಬೆಲೆ ಏರಿದೆ. ಇಂತಹ ಒಂದು ಮಸೂದೆಯನ್ನು ಸಭೆಯಮುಂದೆ ಮಂಡಿಸುವುದಕ್ಕೆ ಅವಕಾಶ ಕೊಡುವುದು ತಪ್ಪು ಎಂದು ಹೇಳಬೇಕಾದರೆ ತಮಗೆ ಮನದಟ್ಟಾಗುವಂತೆ ಹೆಚ್ಚಿಗೆ ಮನಸ್ಸಿಗೆ ಮುಟ್ಟುವ ಹಾಗೆ ಹೇಳಬೇಕು.

ಅಧ್ಯಕ್ಷರು.—ನಿಮ್ಮ ಮನಸ್ಸಿಗೆ ಮನದಟ್ಟಾದರೆ ಸಾಕು.

ಶ್ರೀ ಎಸ್. ಗೋಪಾಲಗೌಡ.—ಈ ವಿಷಯ ಡಿಬೇಟ್ ಆಗಬಾರದು ಎಂದು ಕಡೆಯ ತೀರ್ಮಾನಕ್ಕೆ ಬಂದವನು ನಾನು. ಈ ಸಭೆಗೆ ಅಧಿಕಾರ ಇದೆ. ಸದಸ್ಯರಿಗೆ ಅನುಕೂಲಗಳನ್ನು ಹೇಗೆ ಕಲ್ಪಿಸಿಕೊಳ್ಳಬಹುದು, ಹಾಗೆಯೇ ದೇಶದ ಜನತೆಯ ಸುಖ, ಕಷ್ಟ ಮತ್ತು ಅವರ ಆಗು ಹೋಗುಗಳು ನಿರ್ಣಯಿಸುವುದಕ್ಕೆ ಮತ್ತು ಅವರಿಗೆ ಅನುಕೂಲ ಮಾಡಿಕೊಡುವುದಕ್ಕೆ ಈ ಸಭೆ ಜವಾಬ್ದಾರಿ ಆಗಿದೆ. ಇವೊತ್ತು ಬಹಳ ಜನರು ಕಷ್ಟದಲ್ಲಿದ್ದಾರೆ. ಹೊರಗಡೆ ಉದ್ಯೋಗ ಇಲ್ಲದೇ ಇರುವವರು ಇದ್ದಾರೆ. ಉದ್ಯೋಗ ಇದ್ದು ಎರಡು ಹೊತ್ತು ಊಟಕ್ಕೆ ಆಗದೇ ಇರುವಷ್ಟು ಕಡಿಮೆ ಸಂಬಳ ಪಡೆಯುವವರು ಇದ್ದಾರೆ. ಇಂತಹ ಏಷ್ಟೋ ವರ್ಗಗಳು ಬಹಳ ಹೀನಸ್ಥಿತಿಯಲ್ಲಿ ಜೀವನ ನಡೆಸ ತ್ತಿದ್ದಾರೆ. ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಮಾನ್ಯ ಸಚಿವರು ಅವರ ಕಷ್ಟಗಳನ್ನು ಅವರ ಬಾಯಿಂದಲೇ ಹೇಳಲಿ. ಪೂರ್ತಿ ಹೊತ್ತು ಸರ್ಕಾರದ ಕೆಲಸ ಮಾಡಿಕೊಂಡು ಇದ್ದೇವೆ. ನಮಗೆ ಇಂತಿಂತಹ ಕಷ್ಟಗಳು ಇವೆ, ನಮ್ಮ ಸಂಸಾರಗಳು ದೊಡ್ಡವು, ಬೇರೆ ಉದ್ಯೋಗ ಮಾಡುವುದಕ್ಕೆ ಅವಕಾಶ ಇಲ್ಲ, ನಮಗೆ ಬೇರೆ ಆದಾಯ ಇಲ್ಲ, ಬೆಲೆಗಳು ಏರಿರುವುದರಿಂದ ನಮ್ಮ ಸಂಸಾರಗಳನ್ನು ತೂಗಿಸಿಕೊಂಡು ಹೋಗುವುದು ಕಷ್ಟವಾಗಿದೆ ಎಂದು ಹೇಳಿ ಮಾನ್ಯ ಮುಖ್ಯ ಸಚಿವರಾಗಲಿ, ಹಣ ಕಾಸಿನ ಸಚಿವರಾಗಲಿ, ಅಥವಾ ಪಾರ್ಲಿಮೆಂಟರಿ ಅಫೇರ್ಸ್ ಸಚಿವರಾಗಲಿ ಈ ಒಂದು ಮಸೂದೆಯನ್ನು ತಂದಿದ್ದರೆ ಅದನ್ನು ವಿರೋಧಮಾಡತಕ್ಕಂಥ ಪ್ರಮೇಯ ಬಹುಶಃ ಬರುತ್ತಾ ಇರಲಿಲ್ಲ. ಅದರಲ್ಲಿ ತಾವು ತಿಳಿದುಕೊಳ್ಳಬೇಕಾದುದು ಮುಖ್ಯವಾದ ಅಂಶ, ಅದು ವಿರೋಧಪಕ್ಷದ ರೀತಿನೀತಿ, ವಿರೋಧಪಕ್ಷಗಳು ಹೊತ್ತಿರತಕ್ಕಂಥ ಹೊಣೆ, ಅವುಗಳಿಗೆ ಇರತಕ್ಕಂಥ ನೈತಿಕ ಜವಾಬ್ದಾರಿ ಮತ್ತು ಈ ಸದಸ್ಯರು ಮಾಡಬೇಕಾದ ಮತ್ತು ಮಾಡಬಾರದ ಕರ್ತವ್ಯಗಳು ಮತ್ತು ಕೆಲಸಗಳು ಇವುಗಳನ್ನು ನಾವು ಯೋಚನೆ ಮಾಡಬೇಕು. ಮಾನ್ಯ ಅಧ್ಯಕ್ಷರಿಗೆ ಗೊತ್ತಿರಬಹುದು, ಕೇರಳದಲ್ಲಿ, ಮದ್ರಾಸಿನಲ್ಲಿ ಪಶ್ಚಿಮ ಬಂಗಾಳದಲ್ಲಿ ಬಿಹಾರ್‌ನಲ್ಲಿ, ಉತ್ತರ ಪ್ರದೇಶಲ್ಲಿ ನಿನ್ನೆ ಮೊನ್ನೆ ಮಧ್ಯ ಪ್ರದೇಶದಲ್ಲಿ, ಈ ಎಲ್ಲಾ ರಾಜ್ಯಗಳಲ್ಲಿ 20 ವರ್ಷಕಾಲ ಯಾರಾದರೂ ಕಾಂಗ್ರೆಸ್ಸಿನ ಆಡಳಿತವನ್ನು ಒಂದೇ ಸಮನೇ ಒಳಗೂ ಮತ್ತು ಹೊರಗೂ ವಿರೋಧ ಮಾಡುತ್ತಿದ್ದರೋ ಅವರೇ ಈಗ ಅಧಿಕಾರದಲ್ಲಿ ಇದ್ದಾರೆ. ಅವರು ಜವಾಬ್ದಾರಿ ರೀತಿಯಿಂದ ವರ್ತಿಸುತ್ತಿದ್ದಾರೆ.

Mr. SPEAKER.—This Bill is not meant for any party.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಸಿದ್ಧವೀರಪ್ಪನವರು ಜೈಜರಿ ಬೆಂಚಿನಲ್ಲಿ ಕುಳಿತು ಕೊಳ್ಳಲೇ ಎಂದು ಕೇಳಿದರೆ, ಬೇಡ ಬೇಡ ಎಂದು ನಕ್ಕುಬಿಟ್ಟರಿ.

ಅಧ್ಯಕ್ಷರು.—ಸರಿಯಾಗಿ ವಿಚಾರವನ್ನು ತಿಳಿದುಕೊಂಡು ಹೇಳಬೇಕು. ಶ್ರೀ ಸಿದ್ಧವೀರಪ್ಪ ನವರು ಟ್ರೈಜರಿ ಬೆಂಚಿನಲ್ಲಿ ಕುಳಿತುಕೊಳ್ಳಲಿಕ್ಕೆ ಕೂಡದು ಎಂದು ಇಷ್ಟರವರೆಗೆ ನಾನು ಆಕ್ಷೇಪ ಮಾಡಲಿಲ್ಲ. ನಾನು ಹೇಳಿದೇಯಿರುವುದನ್ನು ನಿಮ್ಮ ಮಾತಿನಲ್ಲಿ ಸೇರಿಸಲಿಕ್ಕೆ ಕೂಡದು, ಬೇಕಾದರೆ ಅವರು ಕುಳಿತುಕೊಳ್ಳಲಿ, ನನ್ನ ಆಕ್ಷೇಪ ಇಲ್ಲ.

ಶ್ರೀ ಎಸ್. ಗೋಪಾಲಗೌಡ.—ಕ್ಷಮಿಸಬೇಕು; ಪತ್ರಿಕೆಗಳಲ್ಲಿ ಓದಿದೆ. ಬ್ಯಾಕೆಟ್‌ನಲ್ಲಿ ನಗು ಎಂದು ಬರೆದಿತ್ತು. ನನ್ನ ತಿಳುವಳಿಕೆ ತಪ್ಪು ಇರಬಹುದು. ನಿನ್ನೆ ನಾನು ಎದ್ದು ಯಾರೂ ಯಾರು ಸದಸ್ಯರು ಯಾವ ಯಾವ ಪೀಠದಲ್ಲಿ ಕುಳಿತುಕೊಳ್ಳಬಹುದು ಎನ್ನುವ ಚರ್ಚೆ ಆಗುತ್ತಾ ಇದ್ದಾಗ್ಗೆ ಮಾನ್ಯ ಸಿದ್ಧವೀರಪ್ಪನವರು ಎದ್ದು ನಾನು ಟ್ರೈಜರಿ ಬೆಂಚಿನಲ್ಲಿ ಕುಳಿತುಕೊಳ್ಳಬಹುದೇ ಎಂದು ಕೇಳಿದರೆ ತಾವು ರೂಲಿಂಗ್ ಕೊಟ್ಟಿರಿ. ತಾವು ಬೇಡ ಎಂದು ಹೇಳಿದರೋ ಅಥವಾ ಕುಳಿತುಕೊಳ್ಳಿ ಎಂದು ಹೇಳಿದರೋ ನನಗೆ ಗೊತ್ತಿಲ್ಲ.

ಅಧ್ಯಕ್ಷರು.—ಟ್ರೈಜರಿ ಬೆಂಚಿನಲ್ಲಿ ಕುಳಿತುಕೊಳ್ಳುವ ಹಕ್ಕು ಯಾರಿಗೆ ಬರುತ್ತದೋ ಅವರು ಕುಳಿತುಕೊಳ್ಳಬಹುದು, ಅದಕ್ಕೆ ನನ್ನ ಆಕ್ಷೇಪ ಇಲ್ಲ.

ಶ್ರೀ ಎಸ್. ಗೊಪಾಲಗೌಡ.—ಅದೇ ನಾನು ಹೇಳುತ್ತಾ ಇರುವುದು.

ಅಧ್ಯಕ್ಷರು.—ಯಾವ ಪಾರ್ಟಿಯವರು ಎಲ್ಲಿ ಕುಳಿತುಕೊಳ್ಳಬೇಕು ಎಂದು ಹೇಳುವುದಿಲ್ಲ. ಯಾರಿಗೆ ಅಧಿಕಾರ ಉಂಟು ಕಾನೂನು ಪ್ರಕಾರ ಅವರು ಹಾಗೆ ಕುಳಿತುಕೊಳ್ಳುತ್ತಾರೆ. ಯಾರಿಗೆ ಅಧಿಕಾರ ಉಂಟು ಎಂದು ಭಾವಿಸುತ್ತಾರೆ ಅವರು ಸಾಧ್ಯವಾದ ಮಟ್ಟಿಗೆ ಹಾಗೆಯೇ ಹಕ್ಕನ್ನು ಸ್ಥಾಪಿಸಿ ಕುಳಿತುಕೊಳ್ಳಲಿ. ಯಾರು ಯಾವ ಎಲ್ಲೆಲ್ಲಿ ಕುಳಿತುಕೊಳ್ಳಬೇಕು ಎಂದು ನಿರ್ಧಾರ ಮಾಡಿದ್ದಾರೋ ಅವರವರು ಅಲ್ಲೇ ಇರಬೇಕು. ನಿನ್ನೆ ದಿವಸ ಬಂದ ಪಾಯಿಂಟ್ ಏನೆಂದರೆ ಮಾನ್ಯ ಕಾಶೀಮಠ ಸಿದ್ಧಯ್ಯನವರು ಬೇರೆ ಕಡೆ ಇದ್ದರು. ಶ್ರೀ ಶಾಮಣ್ಣನವರು ಬೇರೆ ಕಡೆ ಇದ್ದರು. ಅವರವರ ಜಾಗದಲ್ಲಿ ಕುಳಿತುಕೊಳ್ಳಿ ಎಂದು ಹೇಳಿದೆ. ಆದರೆ ಅವರು ಹೋಗಿ ಆ ಕಡೆ ಕುಳಿತು ಕೊಳ್ಳಬಾರದು ಅಲ್ಲೇ ಕುಳಿತುಕೊಳ್ಳಬೇಕು ಎಂದು ನಾನು ಹೇಳಿದೆ. ನಾನು ಏತಕ್ಕೆ ಹೇಳುತ್ತೇನೆ ಎಂದರೆ, ಅವರು ಅಲ್ಲಿ ಕೂತುಕೊಳ್ಳಬೇಕೇ, ಬೇಡವೇ ಎನ್ನುವ ಹಕ್ಕು ಅವರಿಗೆ ಇದೆ. ಕಾನೂನು ಇದ್ದರೆ ಅದನ್ನು ನಾನು ಹೇಳುವುದು.

ಶ್ರೀ ಎಸ್. ಗೋಪಾಲಗೌಡ.—ಆದುದರಿಂದ ನಾನು ಹೇಳುವುದು ಈ ಮಾನ್ಯ ಸಭೆಯಲ್ಲಿ ಎಲ್ಲಾ ಸದಸ್ಯರೂ ಚುನಾವಣೆಗಳಲ್ಲಿ ಗೆದ್ದು ನಿರ್ವಾಚಿತರಾಗಿ ಶಪಥ ಮಾಡಿ ಎಲ್ಲರೂ ಬಂದು ಇಲ್ಲಿ ಕುಳಿತುಕೊಳ್ಳಬೇಕು; ಅದರ ಹಿಂದೆ ಅವರ ಪಕ್ಷದ ಟಿಕೆಟ್ಟು ಪಕ್ಷದಪ್ರಾಣಾಳಿಕೆ ಎಲ್ಲಾ ಇದೆ. ಅವರು ಏನು ಮಾಡಲಿಕ್ಕೆ ಹೋಗುತ್ತಾರೋ ಅದು ಎಲ್ಲಾ ಕಾನೂನು ಬದ್ಧವಾಗಿ ಆಗಿಬಿಟ್ಟಿದೆ. ರಾಜಕೀಯ ಪಕ್ಷಗಳೂ ಇವೆ. ಅವುಗಳಿಗೆ ಮರ್ಯಾದೆ, ಗೌರವ ಒಂದು ಅಸ್ತಿತ್ವ ಹೊರಗಡೆಯೂ ಇದೆ, ಒಳಗಡೆಯೂ ಇದೆ. ಅವರು ಪಕ್ಷದ ನಿಯಮಗಳನ್ನೆಲ್ಲಾ ಪರಿಪಾಲನೆ ಮಾಡಬೇಕು. ಹಾಗೆ ಮಾಡದಿದ್ದರೆ ಇಲ್ಲಿ ಸ್ಥಾನ ಇರುವುದಿಲ್ಲ. ಅವರು ಇಲ್ಲಿ ಪೋಜು ಮಾಡುವುದಕ್ಕೆ ಅವಕಾಶ ಇರುವುದಿಲ್ಲ. ಕುಳಿತರೆ ಕಾನೂನು ಹೊರಗೆ ಕುಳಿತ್ತಿದ್ದಾರೆ ಎಂದು ಆಗುತ್ತದೆಯೇ ಹೊರತು, ಕಾನೂನು ಪ್ರಕಾರ ಕುಳಿತ್ತಿದ್ದೇವೆ ಎಂದು ಆಗುವುದಿಲ್ಲ. ಶಿರಹಟ್ಟಿ ಕ್ಷೇತ್ರದ ಸದಸ್ಯರು ಅಧಿಕೃತ ಪಕ್ಷದ ಕಾಂಗ್ರೆಸ್ ಉಮೇದುವಾರರನ್ನು ಚುನಾವಣೆಯಲ್ಲಿ ಸೋಲಿಸಿ ಬಂದಿದ್ದಾರೆ. ಅವರು ಕಾಂಗ್ರೆಸ್ ಕೆಟ್ಟಿದೆ, ಕಾಂಗ್ರೆಸ್ ಅಡಳಿತವೂ ಕೆಟ್ಟಿದೆ, ಭ್ರಷ್ಟಾಚಾರದಿಂದ ದೇಶ ಹಾಳಾಗಿದೆ, ದುರ್ಭಿಕ್ಷ ಮತ್ತು ಕ್ಷಾಮ ಇದೆ ಎಂದು ಇಷ್ಟೆಲ್ಲಾ ಜನತೆಯ ಮುಂದೆ ಹೇಳಿ ಇಲ್ಲಿ ಅವರ ಅಭಿಪ್ರಾಯ ವ್ಯತ್ಯಾಸ ಮಾಡುವುದು ಸಾಧುವಲ್ಲ.

4-00 P.M.

ಆ ರೀತಿ ಬರವಣಿಗೆಯಲ್ಲಿ ಕೊಟ್ಟು, ನಾನು ಸ್ವತಂತ್ರ ಪಕ್ಷದವನು, ನನ್ನ ಗುರುತು ನಕ್ಷತ್ರ ಎಂದು.....

ಶ್ರೀ ಎಸ್. ಶರಣಗೌಡ ಇನಾಂದಾರ್ (ಜಿವಾರ್ಗಿ).—ಸಾರ್, ಒಂದು ಕ್ರಿಯಾಲೋಪ. ಶ್ರೀಮಾನ್ ಗೋಪಾಲಗೌಡರು ಆ ಮನುಷ್ಯನನ್ನು ಆ ಸದಸ್ಯರು ಸಭೆಯ ಮುಂದೆ ಮೂವ್ ಮಾಡಬೇಕೋ ಅಥವಾ ಮಾಡಬಾರದೋ ಎಂಬುದನ್ನು ತಿಳಿಸುವುದಕ್ಕೆ ಬದಲಾಗಿ ಅವರು ಅವರ ಮೆನಿಫೆಸ್ಟೋದಲ್ಲಿ ಹಾಗಿದೆ, ಹೀಗೆ ಇದೆ ಎಂದು ಹೇಳುತ್ತಿರುವುದು ಸರಿಯಲ್ಲ.....ಇತರೆ ಪಾರ್ಟಿಗಳಿರುವಂತೆ ನಮ್ಮ ಸ್ವತಂತ್ರ ಪಾರ್ಟಿಗೂ ಇದೆ.....

(SRI S. SHARAN GOWDA INAMDAR)

Every political Party has its own manifesto. It has made it clear, and it is none of our business here to say anything about the manifesto. We know our responsibility. Sri Siddaiah Kasimath is a Member of our Party and being a Member of our Swatantra Party, he has moved the Bill. He is moving it in his individual capacity. But in any case raising the salary of Members and Ministers, etc. does not come under the financial policy or any other policy of our Party.

Another thing is, there are so many things on which the Swatantra Party has different views. So far as the national language is concerned, we have our own views. Some may have Hindi or English as the national language. But I do not think any Member has any business to point out the manifesto or cast any aspersions on the manifestos of other Parties.

Sri SIDDAIAH KASHIMATH.—Only the people who have elected me can question me. Not this Hon'ble Member, Sir.

Sri S. SHARAN GOWDA.—One thing is clear. I have made it clear that the Swatantra Party has not sponsored it. He is moving it in his own individual capacity; and so far as our manifesto and our policy is concerned, it has nothing to do with this. I therefore request the Hon'ble Member not to cast any remarks like this which would adversly affect the position and status of our party in the House here. (Congress applause). There is a limit. We should not go so deep. I have had to say this because I have to safeguard the interest of the Members of our Party here.

Sri SIDDAIAH KASHIMATH.—Sir, I have already told you that I have moved this in my personal capacity. People who have elected me in my constituency, know their responsibility. I am answerable to them. Mr. Gopala Gowda need not refer to that.

Mr. SPEAKER.—The whole difficulty arises because we mix up ideas. There are several considerations and these considerations will have to be dealt with in proper fields and proper quarters. Before the House, the only position is as to how the matter is brought before the House. If it is a Bill, how it is to be introduced. We are still at the stage of leave to introduce. Everybody knows the scope of the debate. Feelings were roused, indications are given. I did not want to shut out, so that there may not be any grievance that they have not been permitted to say anything on that. I believe Mr. Gopala Gowda began his speech somewhere about 3.40—nearly twenty minutes have been utilised by the opposition at the introduction stage, analysing what has been said, a good deal about party matters, a good deal as to what the Party should say with regard to ideologies—several other matters which do not come in under the clause or the provisions of the Bill has been said. The House is concerned with the merits and demerits, the rights and wrongs of the

provisions of the Bill. It is the provisions of the Bill that are going to be debated. Whether a member has got a right or not is the only question that the House will have to consider, whether the Member has the leave of the House or not, is what is to be determined. Whether a member belonging to a Party should have done it or not is not the point. Whether he is in the Opposition or whether he is in the Ruling Party—all these matters do not arise as I indicated at the very beginning in my ruling. It may be a Government Bill or a Private Bill. A private Bill might be brought by any Member. There is no distinction between Opposition Member or Ruling Party member. The ruling party Members have several occasions of introducing a private bill. I did not want to distrub the trend of thought of Sri Gopala Gowda. I feel that he has said all that was possible. I only request him to give only points without entering into the mertis of the Bill. I am sorry this brought in party alliances. It does not come in. You may issue any instructions to the whip within the party and do whatever is necessary. To introduce it in the debate, I really feel, it is not proper or wise. It is certainly wrong to attack one party or another on the floor of the House. What has been done by a Member is a matter for himself or his party and it is a matter involving internal discipline, with which the House is not concerned. Whether it is being done by himself in his individual capacity or with the consent of somebody else, the House always looks at it as it comes before the House. The Bill has been brought in accordance with the procedure. I would appeal and request the Hon'ble Member Mr. Gopala Gowda not to bring in personal considerations into this.

†ಶ್ರೀ ಎಸ್. ಶಿವಪ್ಪ.—ಅಧ್ಯಕ್ಷರೇ, ನಾನು ನೆನ್ನೆಯ ದಿನವೇ ಅಧಿಕೃತವಾಗಿ ಇದೇ ಸಭೆಯಲ್ಲಿ ಇದೇ ವಿಷಯದಲ್ಲಿ ಅಂದರೆ ಶಾನಕರ ಹಾಗೂ ಮಂತ್ರಿಗಳ ನಂಬಿಕ ಸಾರಿಗೆಗೆ ಸಂಬಂಧಪಟ್ಟ ಮಸೂದೆಗಳನ್ನು ವಿರೋಧಪಕ್ಷಗಳ ಸದಸ್ಯರಾರೂ ಮಂಡಿಸಬಾರದು ಎಂಬುದಾಗಿ ತೀರ್ಮಾನ ಮಾಡಿಕೊಂಡಿದ್ದೇವೆಂದು ಹೇಳಿದ್ದೆನು. ಆದರೆ ನನಗೆ ಸ್ವತಂತ್ರ ಪಕ್ಷದ ವಿಚಾರದಲ್ಲಿ ಯಾವ ವಿರೋಧವೂ ಇಲ್ಲ. ಆ ಪಕ್ಷದ ಪರವಾಗಿ ನಾನು ಯಾವ ಅಪಾದನೆಗಳನ್ನೂ ಮಾಡಿಲ್ಲ. ಆದರೆ ಶ್ರೀ ಸಿದ್ಧಯ್ಯ ಕಾಶಿಮಠ್ ಅವರು ಆ ಮಸೂದೆಯನ್ನು ಅವರು ಅವರ ಪಕ್ಷದ ಪರವಾಗಿ ಮಂಡಿಸುತ್ತಿಲ್ಲ ಅವರು ವೈಯಕ್ತಿಕವಾಗಿ ಮಂಡಿಸುತ್ತಿದ್ದಾರೆ ಎಂಬುದನ್ನು ಶ್ರೀ ಗೋಪಾಲಗೌಡರು ಈಗ ಹೇಳುತ್ತಿದ್ದಾರೆ. ಈ ದಿವನ ನಾವು ಆ ಸ್ವತಂತ್ರ ಪಕ್ಷದವರು ಯಾರನ್ನೂ ನಿಂದನೆ ಮಾಡಲಲ್ಲ. ಶ್ರೀಮಾನ್ ಸಿದ್ಧಯ್ಯ ಕಾಶಿಮಠ್ ಅವರು ನನ್ನ ಮಿತ್ರರು. ಅವರು ಈಗ ವಿರೋಧಪಕ್ಷದಲ್ಲಿದ್ದಾರೆ. ಅವರಿಗೆ ಇದನ್ನು ತರುವುದಕ್ಕೆ ಯಾವ ಅಸ್ತಿತ್ವವಿದೆ ಎಂದು ಕೇಳುತ್ತಿದ್ದಾರೆ, ಅಷ್ಟೆ.

†ಶ್ರೀ ಎಸ್. ಗೋಪಾಲಗೌಡ.—ಈಗತಾನೆ ಶ್ರೀಮಾನ್ ಶಿವಪ್ಪನವರು ಏನು ಸ್ಪಷ್ಟೀಕರಣ ಮಾಡಿದ್ದಾರೆ ಅದನ್ನು ಅವರೂ ಕನ್ನಡದಲ್ಲೇ ಹೇಳಿದರು, ನಾನೂ ಅದನ್ನು ಕನ್ನಡದಲ್ಲೇ ಹೇಳುತ್ತಿದ್ದೆ. ಇಲ್ಲ ಈಗ ಸ್ವತಂತ್ರ ಪಕ್ಷದವರನ್ನು ಟೀಕೆ ಮಾಡಿದರು ಎಂಬ ಅಭಿಪ್ರಾಯಕ್ಕೆ ಶ್ರೀಮಾನ್ ಶರಣಗೌಡರು ಹೇಗೆ ಬಂದರೋ ಅದು ನನಗೆ ಗೊತ್ತಾಗುವುದಿಲ್ಲ. ವಿರೋಧಪಕ್ಷದವರಿಗೂ ಕೆಲವು ಜವಾಬ್ದಾರಿಗಳೂ ಮತ್ತು ಕರ್ತವ್ಯಗಳೂ ನಿರ್ವಹಿಸಲ್ಪಟ್ಟವೆ ; ಅವುಗಳನ್ನು ನಾವು ಒಪ್ಪಿಕೊಂಡು, ಮಾಡುತ್ತೇವೆ ಎಂದು ಇಲ್ಲಿ ಬಂದು ಕುಳಿತಿದ್ದೇವೆ.

ಆದ್ದರಿಂದ ಇವತ್ತು ನಾನು ಹೇಳುವುದೇನೆಂದರೆ ಮಂತ್ರಿಗಳ ನಂಬಿಕ ಸಾರಿಗೆಗಳನ್ನು ಹೆಚ್ಚು ಮಾಡತಕ್ಕ ಹೊಣೆಗಾರಿಕೆ ಅಥವಾ ಕರ್ತವ್ಯ ವಿರೋಧ ಪಕ್ಷದವರ ಮೇಲೆ ಇದೆಯೇ ಎನ್ನುವುದು ಒಂದು ಪ್ರಶ್ನೆ. ಅದನ್ನು ವಿರೋಧ ಪಕ್ಷದವರಾಗಿ ನಾವು ವಿಚಾರ ಮಾಡಬೇಕು. ಆದ್ದರಿಂದ ಈ ವಿಷಯವನ್ನು ಅಥವಾ ಮಸೂದೆಯನ್ನು ಆಡಳಿತ ಪಕ್ಷದವರು ವಿರೋಧ ಪಕ್ಷದ ಸದಸ್ಯರಿಂದ ಈ ಮಾನ್ಯ ಸಭೆಯ ಮುಂದೆ ಮಂಡಿಸಬೇಕೆಂದು ಹೊರಟಿರುವುದರಲ್ಲಿ ಯಾವ ರಾಜಕೀಯ ಇದೆ

(ಶ್ರೀ ಎಸ್. ಗೋಪಾಲಗಡ)

ಎನುವುದನ್ನು ಮಾತ್ರ ಹೇಳುತ್ತೇನೆ. ಈ ಮಸೂದೆಯನ್ನು ಈ ಮನೆಯಮುಂದೆ ಮಂಡಿಸ ಬಾರದಾಗಿತ್ತು. ಮಾನ್ಯ ಸಿದ್ದಯ್ಯ ಕಾಶೀಮಠ್‌ರವರು ತಮ್ಮ ಸಂಬಳ ಸಾರಿಗೆ ವಿಷಯದಲ್ಲಿ ಮಸೂದೆಯನ್ನು ಮಂಡಿಸಿದ್ದಾರೆ, ಅದು ಹೇಗೆ ಅಂಗೀಕಾರ ಹೊಂದುತ್ತದೆ ಎಂಬುದನ್ನು ನೋಡಿ ಕೊಂಡಿದ್ದರೆ ಸಾಕಾಗಿತ್ತು. ಅದರ ಜೊತೆಯಲ್ಲಿ ಮಂತ್ರಿಗಳ ಹಾಗೂ ಉಪಮಂತ್ರಿಗಳ ಸಂಬಳ ಹೆಚ್ಚಿಸುವುದು ಮತ್ತು ಭತ್ಯವನ್ನು ಹೆಚ್ಚಿಸುವುದಕ್ಕೆ ಈ ಮಸೂದೆಯನ್ನು ವಿರೋಧಪಕ್ಷದವರು ಮಂಡಿಸಬಾರದಾಗಿತ್ತು. ಇದರಲ್ಲಿ ನೀತಿ ಇಲ್ಲ, ಕಾಂಗ್ರೆಸ್ ಪಕ್ಷದವರು ಅಥವಾ ಆಳುವ ಪಕ್ಷದವರು ವಿರೋಧ ಪಕ್ಷದವರ ಮುಖಕ್ಕೆ ಈ ಮಸೂದೆಯನ್ನು ಅವರ ಕೈಯಿಂದ ತರಿಸುವುದರಿಂದ ಮಸಿ ಬಳಿಸಬೇಕೆಂದು ತಿಳಿದುಕೊಂಡಿದ್ದರೆ, ಅವರೇ ಅವರ ಮುಖಕ್ಕೆ ಸ್ವತಃ ಮಸಿಯನ್ನು ಬಳಿದು ಕೊಳ್ಳುತ್ತಾರೆ ಎಂಬ ಮಾತನ್ನು ಈ ಸಭೆಗೆ ಹೇಳುತ್ತೇನೆ. ಮತ್ತು ಈ ಮಸೂದೆಯನ್ನು ಈ ಮಾನ್ಯ ಸಭೆಯ ಮುಂದೆ ಮಂಡಿಸುವುದಕ್ಕೆ ಅವಕಾಶ ಕೊಡಬಾರದಾಗಿತ್ತು ಎಂದು ಹೇಳಿ ಹತ್ತು ನಿಮಿಷ ಇದನ್ನು ವಿರೋಧಿಸುತ್ತೇನೆ.

ಶ್ರೀ ಎಚ್. ಬಿ. ಜ್ವಾಲನಯ್ಯ (ಹಾನಗಲ್).—ಇದು ಸ್ವತಂತ್ರ ಪಕ್ಷಕ್ಕೆ ಸಂಬಂಧಪಟ್ಟದ್ದು ಆದ್ದರಿಂದ ನಾನು ಒಂದೆರಡು ಮಾತುಗಳನ್ನು ಆಡಬೇಕೆಂದು ಇದ್ದೇನೆ.

Mr. SPEAKER.—Now those who want to oppose will please sit down. Will Sri Jwalaniah, add anything or is it a question of personal statement? I don't know whether matters will be made worse among themselves. To me it does not matter.

† ಶ್ರೀ ಎಚ್. ಬಿ. ಜ್ವಾಲನಯ್ಯ.—ನಮ್ಮ ಮಿತ್ರರಾದ ಸಿದ್ದಯ್ಯ ಕಾಶೀಮಠ್ ಅವರು ಈ ಒಂದು ಬಿಲ್ಲನ್ನು ಸಭೆಯ ಮುಂದೆ ಏನು ತಂದಿದ್ದಾರೋ ಇದಕ್ಕೆ ಸ್ವತಂತ್ರ ಪಕ್ಷದ ಅನುಮತಿ ಇಲ್ಲ, ಅವರು ವೈಯಕ್ತಿಕವಾಗಿ ಇದನ್ನು ಸಭೆಯ ಮುಂದೆ ತಂದಿದ್ದಾರೆ. ನಾನು ಸ್ವತಂತ್ರ ಪಕ್ಷದ ಲೀಡರ್ ಆಗಿ ಈ ಮಾತನ್ನು ಹೇಳುತ್ತಾ ಇದ್ದೇನೆ. ಮೈಸೂರು ಸಂಸ್ಥಾನದ ಸ್ವತಂತ್ರ ಪಕ್ಷವು ಕೂಡ ಈ ವಿಚಾರಕ್ಕೆ ತನ್ನ ಅನುಮತಿಯನ್ನು ಕೊಟ್ಟಿಲ್ಲ. ಶ್ರೀಮಾನ್ ಕಾಶೀಮಠ್ ಅವರು ತಮ್ಮ ವೈಯಕ್ತಿಕ ಜವಾಬ್ದಾರಿಯಿಂದ ಇದನ್ನು ಸಭೆಯ ಮುಂದೆ ತಂದಿದ್ದಾರೆ ಆದ್ದರಿಂದ ನಾನು ಇದನ್ನು ವಿರೋಧಿಸುತ್ತೇನೆ ಮತ್ತು ಮೈಸೂರು ಸಂಸ್ಥಾನದ ಸ್ವತಂತ್ರ ಪಕ್ಷವೂ ಕೂಡ ವಿರೋಧಿಸುತ್ತದೆ. ಮಂತ್ರಿಗಳು ತಮಗೆ ಬರುತ್ತಾ ಇರುವಂತಹ ಸಂಬಳ ಸಾಲದು ಎಂದು ಅವರು ತಿಳಿದಿದ್ದರೆ ಅಥವಾ ಕಷ್ಟವನ್ನು ಅನುಭವಿಸುತ್ತಾ ಇದ್ದರೆ ಅವರೇ ಇದನ್ನು ತರಬಹುದಾಗಿತ್ತು. ವಿರೋಧ ಪಕ್ಷದ ಸದಸ್ಯರಿಂದ ತರಿಸಬೇಕಾದ ಅವಶ್ಯಕತೆ ಇರಲಿಲ್ಲ, ಅವರೇ ಸಭೆಯನ್ನು ಕೇಳಬಹುದಾಗಿತ್ತು.

Sri SIDDIAH KASIMATH.—I have already cleared the point. They have not told me anything. I myself brought this Bill. I am not acting for anybody else.

ಶ್ರೀ ಎಚ್. ಬಿ. ಜ್ವಾಲನಯ್ಯ.—ತಮ್ಮ ಮುಖಾಂತರ ಈ ಸಭೆಗೆ ಸ್ಪಷ್ಟವಾಗಿ ತಿಳಿಸುಮನು ತ್ತೇನೆ, ಮಂತ್ರಿಗಳ ಸಂಬಳವನ್ನು ಹೆಚ್ಚುಮಾಡಬೇಕೆಂದು ಈ ದಿನ ಸಭೆಯ ಮುಂದೆ ಈ ಒಂದು ನಿಲುವಳಿ ಏನು ಬಂದಿದೆ ಇದಕ್ಕೆ ಮಂತ್ರಿಗಳ ಆಶೀರ್ವಾದ ಇರಲೇಬೇಕು. ಅವರು ಹಿಂದಿನಿಂದಲೂ ಕೂಡ ಎಸ್. ಜಿ. ಓ. ಗಳಿಗೆ ಹೆಚ್ಚು ಸಂಬಳ ಕೊಡುವುದಕ್ಕೆ ದುಡ್ಡಿಲ್ಲ ಎಂದು ಹೇಳುತ್ತಾ ಬಂದಿದ್ದಾರೆ, ಅದೇ ರೀತಿ ಯಾವ ಯೋಜನೆಯನ್ನು ತೆಗೆದುಕೊಳ್ಳಬೇಕೆಂದರೂ ಕೂಡ ದುಡ್ಡಿಲ್ಲ ಎಂದು ಆರ್ಥಿಕ ಮಂತ್ರಿಗಳು ಹೇಳುತ್ತಾ ಇದ್ದಾರೆ. ಅವರು ಈಗ ಸಭೆಯಲ್ಲಿ ಇಲ್ಲದೇ ಇರುವುದು ನಿಜವಾಗಿಯೂ ಕೂಡ ಸರಿಯಲ್ಲ ಎಂದು ಹೇಳಿ ಅನಿಸುತ್ತಾ ಇದೆ, ಅದರ ಜೊತೆಗೆ ಈ ಪಾರ್ಲಿಮೆಂಟರಿ ಮಂತ್ರಿಗಳು ಏನಿದ್ದಾರೆ ಅವರು ನಮ್ಮ ಮಿತ್ರರಾದ ಸಿದ್ದಯ್ಯ ಕಾಶೀಮಠ್ ಅವರು ತಂದಿರುವಂತಹ ಈ ಬಿಲ್ಲನ್ನು ಒಂದು ದೇಶದ ದೃಷ್ಟಿಯಿಂದ, ಆರ್ಥಿಕ ದೃಷ್ಟಿಯಿಂದ ವಿರೋಧ ಪಕ್ಷದವರು ವಿರೋಧ ಮಾಡಿದರೂ ಕೂಡ ಇದಕ್ಕೆ ಭರವಸೆ ಕೊಟ್ಟಿದ್ದಾರೆ.

ಶ್ರೀ ಎಸ್. ಆರ್ ಕಂಠಿ.—ನನ್ನ ಹೆಸರನ್ನು ಹೇಳಬೇಡಿ.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ಯೋಜನೆಗಳಿಗೆ ದುಡ್ಡಿಲ್ಲ ಎಂದು ಹೇಳುತ್ತೀರಿ, ಎಸ್. ಜಿ. ಓ. ಗಳಿಗೆ ಸಹಾಯ ಮಾಡುವುದಕ್ಕೆ ದುಡ್ಡಿಲ್ಲ ಎಂದು ಹೇಳುತ್ತೀರಿ, ಹಾಗಿರುವಾಗ ಈ ರೀತಿ ಸಂಬಳ ಹೆಚ್ಚು ಮಾಡಿಕೊಳ್ಳುವುದಕ್ಕೆ ಅವಕಾಶವಿದೆಯೇ ಎಂದು ಕೇಳುತ್ತೇನೆ.

ಶ್ರೀ ಎಸ್. ಆರ್. ಕಂಠಿ.—ನೀವು 16 ರೂಪಾಯಿ ಡೈಲಿ ಅಲೋಯನ್ಸ್ ಏನು ತೆಗೆದು ಕೊಳ್ಳುತ್ತಾ ಇದ್ದೀರಿ ಅದನ್ನು ಬಿಟ್ಟುಬಿಡಿ, ನಾವು ಸಂಬಳ ತೆಗೆದುಕೊಳ್ಳುತ್ತಾ ಇದ್ದೇವೆ ಅದನ್ನು ನಾವು ಬಿಡುವುದಿಲ್ಲ. ನಿಮಗೆ ಬೇಡಾಂದ್ರೆ ಬಿಡ್ರಿ.

ಶ್ರೀ ಎಸ್. ಶಿವಪ್ಪ.—ನಾವು ಬಿಡಿಸುತ್ತೇವೆ, ಜವಾಬ್ದಾರಿಯುತರಾದ ಜನ ಬಿಡಿಸುತ್ತಾರೆ. ಹೆದರಿಕೊಳ್ಳಬೇಡಿ.

ಶ್ರೀ ಕೆ. ಎಚ್. ಪಾಟೀಲ್.—ಪಾಯಿಂಟ್ ಆಫ್ ಆರ್ಡರ್ ಸರ್, ಈ ಸಭೆಯು ಎದುರು ಮುಂತ್ರಿಗಳ ಸಂಬಳ ಸಾರಿಗೆ ವಿಷಯಕ್ಕೆ ಸಂಬಂಧಪಟ್ಟಂತಹ ಒಂದು ಬಿಲ್ಲನ್ನು ಇಂಟ್ರೊಡ್ಯೂಸ್ ಮಾಡುವಾಗ ಪಾರ್ಲಿಮೆಂಟರಿ ಮಂತ್ರಿಗಳಾದ ಮಾನ್ಯ ಕಂಠಿಯವರು ಈ ಸಭೆಯ ನಡವಳಿಕೆಯನ್ನು ಏನಾರಿ ಶ್ರೀಮಾನ್ಯ ಜ್ವಾಲನಯ್ಯನವರು ಹೇಳುತ್ತಿರುವದನ್ನು ಪ್ರತಿಭಟಿಸುತ್ತಿರುವುದು ಸರಿಯಲ್ಲ.

ಶ್ರೀ ಎಸ್. ಆರ್. ಕಂಠಿ.—ನಾನು ಸಭೆಯ ನಡವಳಿಕೆಯನ್ನು ಏನಾರಿ ಏನನ್ನೂ ಹೇಳಲಿಲ್ಲ ಹಾಗೆ ಅವರು ಹೇಳುವುದು ತಪ್ಪು. I protest against this.

Sri M. S. KRISHNAN.—When there is a Point of Order, how can he be disturbed ?

Mr. SPEAKER.—This is the first point of order ; I am raising point of order No. 1. All the other points of order come after the first point of order raised by me is over.

(*Laughter*)

The first point of order is that there should be no disorder in the House. The second is whatever we want to say or do, let us do it in the proper manner. One thing is certain. In their enthusiasm, Members are attributing motives and bringing in individuals, at a stage when there is not even a debate and when the Bill has not come up for consideration by the House. The point is whether it should be introduced or not. To say that it was brought by somebody, on behalf of somebody, is not being brought by somebody and express opinions on a multitude of pects, will not help. I have allowed scope for that. If every Member goes on saying, I would like to say something, and repeat what others have said, there is absolutely no point. Because Mr. Gopala Gowda introduced the party, Mr. Saran Gowda felt that his party had been attacked and something has been done about the ideology he represents; and it rebounds itself by personal allegation. I come to the awkward position by personal allegation. If it is understood as personal allegation and if a personal statement and clarification to be given is in accordance with the principles of natural justice it is something. But if somebody is attacked and if an ideology is attacked, that is not proper. The only remedy I can suggest is by giving a ruling how for a member is entitled to make a personal statement. And if he brings in something more again, it becomes difficult. I did not understand what exactly Sri Jwalaniah wanted to say. I do not understand till members express themselves. He is saying the same thing that is said by many other members. The point is whether this House holds the Motion in order. I have said, it is in order; whether leave should be given depends upon the vote. Please do not go beyond the limit and the scope of the debate, saying, I want to oppose the Bill can you say, he is incompetent and therefore leave should not be given? It is made very clear that he has not brought it on behalf of the Party. Is it necessary that I should be

(Mr. SPEAKER)

convinced that it is brought on behalf of the Party? He has taken the liberty and exercised the right that is given to him to bring a Bill There the matter ends.

Sri K. H. PATIL.—Sir, I was obstructed by the Minister for Parliamentary Affairs. I have not yet stated it fully. I was narrating the point of order.

Mr. SPEAKER.—Do not repeat it.

Sri K. H. PATIL.—I do not repeat Sir. ಶ್ರೀಮಾನ್ ಜ್ಯಾಲನಯ್ಯನವರು ತಮ್ಮ ಪಕ್ಷದ ವತಿಯಿಂದ ಎಕ್ಸ್‌ಪ್ಲನೇಷನ್ ಕೊಡುವಾಗ ಮತ್ತು ವಿರೋಧಪಕ್ಷದವರು ಈ ಮನೂದೆಯ ಹಿನ್ನೆಲೆ ಏನೂ ಇಲ್ಲವೆಂದು ಹೇಳುವಾಗ ಪಾರ್ಲಿಮೆಂಟರಿ ಮಂತ್ರಿಗಳಾದ ಶ್ರೀಮಾನ್ ಕಂಠಿಯವರು ತಮಗೆ ಸಂಬಂಧಿಸದೆ ಇರುವಂಥ ವಿಷಯಗಳನ್ನು ತಾವೇ ವಹಿಸಿಕೊಂಡು ಅವು ತಮಗೇ ಸಂಬಂಧಿಸಿವೆಯೆಂಬುದಾಗಿ ಅರ್ಥಮಾಡಿಕೊಂಡು ತಮ್ಮ ಒಂದು ಪರ್ಸನಲ್‌ಸ್ಟೇಟ್‌ಮೆಂಟ್ ಕೊಡಲು ಸರಿಯಾದ ಮಾರ್ಗವನ್ನು ಹುಡುಕದೆ ಈ ಸಭೆಯು ಎದುರಿಗೆ ನಿಂತಿದ್ದು ತಪ್ಪು.

Sri S. R. KANTHI.—Sir, I would like the Chair to read what I said and what was the purport of my saying. Unnecessarily, he is imagining something. I did not say so much but he is imagining.

Mr. SPEAKER.—I know, there is so much of imagining during this half-an-hour and more. But, if the hon. Minister of Parliamentary Affairs wants to know what exactly he said, I will deal with it tomorrow.

† ಶ್ರೀ ಎಚ್. ಬಿ. ಜ್ಯಾಲನಯ್ಯ.—ನರ್ಕಾರದವರು ಈ ಮನೂದೆಯನ್ನು ಈ ಸಭೆಯ ಮುಂದೆ ಇಡಬೇಕೆಂದು ಅನುಮತಿಯನ್ನು ಕೇಳುತ್ತಿದ್ದಾರೆ. ತಾವು ಖಂಡಿತವಾಗಿ ಕಾಂಗ್ರೆಸ್ಸಿನವರಿಗೆ ಆ ರೀತಿಯಾಗಿ ಅನುಮತಿಯನ್ನು ಕೊಡಬಾರದು. ಏತಕ್ಕೆಂದರೆ, ಮಂತ್ರಿಮಂಡಲವೇನಿದೆ ಅದು ದೇಶಸೇವೆ ಮಾಡುತ್ತೇನೆಂದು ಹೇಳಿಕೊಂಡುಬಂದು, ಈಗ ಅವರಿಗೆ ಕೊಡುತ್ತಿರುವ ನಂಬಳದಲ್ಲಿ ಅವರಿಗೆ ಕೆಲನಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ, ಅವರು ಆ ಕೆಲನವನ್ನು ಬಿಟ್ಟುಹೋಗಲಿ. ಆದರೆ ಯಾರು ಆ ನಂಬಳಕ್ಕೆ ಒಪ್ಪುತ್ತಾರೋ ಅಂತಹವರು ಆ ಜಾಗದಲ್ಲಿ ಬಂದು ಕುಳಿತು ಕೆಲನಮಾಡುತ್ತಾರೆ.

ಅಧ್ಯಕ್ಷರು.—ಮಂತ್ರಿಮಂಡಲಕ್ಕೆ ಎಂದು ಈ ಮನೂದೆಯಲ್ಲಿಲ್ಲ.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಪಾರ್ಲಿಮೆಂಟರಿ ಮಂತ್ರಿಗಳು ಏನಿದ್ದಾರೆ, ಅವರು ಎಲ್ಲರಿಗೂ ಮಾರ್ಗದರ್ಶಕರಾಗಿ ಇರಬೇಕು. ಆದರೆ ಇವತ್ತು ಅವರು ಹೇಳುತ್ತಿರುವುದನ್ನು ನೋಡಿದರೆ, ತಾವು ಅವರಿಗೆ ಖಂಡಿತವಾಗಿಯೂ ಈ ವಿಚಾರದಲ್ಲಿ ಮುಂದೇನೂ ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬಾರದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

Sri K. H. PATIL.—Sir, the ruling is not given. The hon. Minister for Parliamentary Affairs is taking the law into his own hands.

Sri S. R. KANTHI.—Sir, I object to the statement of the hon. Member.

Sri K. H. PATIL.—Sir, I do make the statement and I take the responsibility.

Sri S. R. KANTHI.—He is taking the law into his own hands.

Sri K. H. PATIL.—The hon. Minister is making a threat. Let him not give a threat to me.

Sri S. R. KANTHI.—Sir, I am not making any threat.

ಶ್ರೀ ಎಸ್. ಗೋಪಾಲಗಾಡ.—ನೀವೇನು ಹೆದರಿಸುತ್ತೀರೇನು *

ಶ್ರೀ ಎಂ. ಜಿ. ಬಣಕಾರ್ (ಬ್ಯಾಡಗಿ).—ಎಲ್ಲಾ ಬೆಂಕಿ ಹಚ್ಚಿದವರೇ ಪಾರ್ಲಿಮೆಂಟರಿ ಮಂತ್ರಿಗಳು. ನಾವು ಯಾರೂ ಅಲ್ಲ.

Mr. SPEAKER.—Order order. Let not the Reporters take down anything, let not the press report.

* * * * * *

What is all this ?

(Sri S. Banagara interrupted)

Mr. SPEAKER.—Order, order. For five minutes. I will not carry on business and I will not allow members to go out ; let tempers cool down. *(laughter)*.

Sri M. S. KRISHNAN.—On a point of order Sir.

Mr. SPEAKER.—No point of order can be permitted to be raised when I am on my legs. How many times I have told the hon. Member not to speak when I am on my legs. There is some limit for tolerance, we are like a happy family.

ಶ್ರೀ ಪಾಟಾಳ್ ನಾಗರಾಜ್ (ಚಿಕ್ಕಜೇಜೆ).—ತಮಗೆ ನಿಂತುಕೊಳ್ಳುವ ಪರಿಸ್ಥಿತಿ ಬಂತಲ್ಲಾ ಎಂದು ನನ್ನ ಸ್ನೇಹಿತರು ವ್ಯಥೆಯಿಂದ ಎದ್ದು ನಿಂತು ಮಾತನಾಡಲು ಪ್ರಯತ್ನಿಸಿದರು.

Mr. SPEAKER.—Order, order. This is worsening the position. After all, there must be a limit. I am trying to bring the House to order. What is the need for all this kind of heat I am not able to understand. Has anybody to win any particular point by this kind of excitement ?

ಶ್ರೀ ಎಸ್. ಶಿವಪ್ಪ.—ಇದೆಲ್ಲದಕ್ಕೂ ಕಾರಣ, ಪಾರ್ಲಿಮೆಂಟರಿ ಮಂತ್ರಿಗಳೇ.

Mr. SPEAKER.—Order, order. Now, I will call upon Sri Jwalaniah to conclude his speech as rapidly as possible.

Sri K. H. PATIL.—Sir, I press my point of order to be considered by you. I am making another appeal .....

Mr. SPEAKER.—Is it a point of order ?

Sri K. H. PATIL.—Yes, Sir. Sri S. R. Kanthi, while I was presenting the case, has given me a threat and such a threat should not be given by the hon. Minister however powerful he may be. He cannot make a threat or disturb the members when they are raising a point of order and when it is adverse to him.

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಾವು ಈ ಸಭೆಯನ್ನು ನಡೆಸುತ್ತಿರುವಾಗ ಇಲ್ಲಿ ಸ್ವಲ್ಪ ಮಾತುಗಳು ಬರುಸಾಗಿ ನಡೆಯುವ ಕಾಲದಲ್ಲಿ ಈ ಸಭೆಯ ಪ್ರೊಸೀಡಿಂಗ್ಸ್‌ನ್ನು ತೆಗೆದುಕೊಳ್ಳುವ ವರಿಗೆ ಅಂತಹ ವಿಚಾರಗಳನ್ನು ಬರೆದುಕೊಳ್ಳುವುದು ಬೇಡವೆಂದು ಹೇಳಿದಿರಿ. ಅದೇ ಸಂದರ್ಭದಲ್ಲಿ ಪ್ರೆಸ್‌ನವರಿಗೂ ಏನೂ ಬರೆದುಕೊಳ್ಳಬೇಡಿ, ಅದನ್ನು ವರದಿಮಾಡಬೇಡಿ ಎಂದು ಹೇಳಿದಿರಿ. ಶಾಸನ ಬದ್ಧವಾಗಿ ಹಾಗೂ ರಾಜ್ಯಾಂಗದತ್ತವಾಗಿ ಬಂದಿರತಕ್ಕ ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆ ಬರುತ್ತದೆಯೋ ಏನೋ ಎಂಬ ಅನುಮಾನ ನನಗೆ ಈಗ ಬಂದಿದೆ.

*** Matter not recorded as ordered by the Chair.

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ತಾವು ಈ ಸಭೆಯನ್ನು ಹತೋಟಿಗೆ ತೆಗೆದುಕೊಳ್ಳತಕ್ಕಂಥ ಅಧಿಕಾರ ಇದ್ದರೂ ಸಹ ಪತ್ರಿಕೆಗಳವರು ವರದಿ ಮಾಡುವುದಕ್ಕೆ ಸ್ವಾತಂತ್ರ್ಯ ಇರಬೇಕು, ಎಂದು ನನ್ನ ಭಾವನೆ ಇದೆ. ಇದರಿಂದಾಗಿ ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕು ಮಾಡಿದ ಹಾಗೆ ಆಗುತ್ತದೋ ಏನೋ ಎನ್ನುವ ಅನುಮಾನ ನನಗೆ ಇದೆ. ಈ ವಿಷಯದಲ್ಲಿ ತಾವು ಒಂದು ತೀರ್ಮಾನವನ್ನು ಕೊಡಬೇಕೆಂದು ನಾನು ಕೇಳುತ್ತೇನೆ.

4-30 P.M.

ಅಧ್ಯಕ್ಷರು —ನಾನು ಒಂದು ವಿಷಯವನ್ನು ಹೇಳುತ್ತೇನೆ. ಅನುಮಾನಗಳ ಮೇಲೆ ತೀರ್ಮಾನ ಕೊಡುವ ಅಭ್ಯಾಸ ನನಗೆ ಇಲ್ಲ. ಸ್ಪಷ್ಟವಾಗಿದ್ದರೆ ಅದನ್ನು ಹೇಳಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟಾಗುತ್ತದೆ ಎಂದು ನನ್ನ ಸ್ಪಷ್ಟ ಅಭಿಪ್ರಾಯ ಇದೆ.

Mr. SPEAKER.—I will give a ruling after studying it.

ಶ್ರೀ ಎಚ್. ಬಿ. ಭ್ಯಾಲನಯ್ಯ,—ಸ್ವಾಮಿ, ನಾನು ಮಾತನಾಡುವುದಕ್ಕೆ ಮುಂಚೆ ತಾವು ಈ ರೀತಿ ನಿರ್ಣಾಯಗುವ ಪರಿಸ್ಥಿತಿಗೆ ಹೋಗಬಾರದು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಂತ್ರಿಮಂಡಲದವರ ಸಂಬಳವನ್ನು ಏರಿಸುವುದಕ್ಕೆ ಸಂಬಂಧಪಟ್ಟ ಮಸೂದೆಯು ಹಿಂದೆ ಇರುವ ಒಂದು ತತ್ವವನ್ನು ನಾನು ವಿರೋಧಿಸುತ್ತೇನೆ. ಈಗಿರುವಂತಹ ಕಾಂಗ್ರೆಸ್ ಮಂತ್ರಿಮಂಡಲ ಏನಿದೆ ಈ ಮಂತ್ರಿ ಮಂಡಲದ ಸಂಬಳ ಮತ್ತು ಇತರ ಸೌಲಭ್ಯಗಳೇನಿವೆ ಅವುಗಳನ್ನು ಹೆಚ್ಚಿಸ ಬೇಕಾದಂತಹ ಅವಶ್ಯಕತೆ ಇಲ್ಲ. ಏತಕ್ಕೆಂದರೆ, ಇವರು ಮಾಡುತ್ತಿರುವ ಕೆಲಸಕ್ಕೆ ಈಗ ಕೊಡುತ್ತಿರುವಂತಹ ಸಂಬಳ ಮತ್ತು ಇತರ ಸೌಲಭ್ಯಗಳು ಹೆಚ್ಚಾಗಿರುತ್ತವೆ. ಆದ್ದರಿಂದ ಈಗ ಇವರಿಗೆ ಹೆಚ್ಚಿನ ಸಂಬಳ ಮತ್ತು ಇತರ ಹೆಚ್ಚಿನ ಸೌಲಭ್ಯಗಳನ್ನು ಕೊಡಬೇಕೆಂದು ತಂದಿರತಕ್ಕಂಥ ಮಸೂದೆ ಏನಿದೆಯೋ ಅದನ್ನು ನಾನು ವಿರೋಧಿಸುತ್ತೇನೆ.

[*Interruptions* : *Several Members Rose*]

Mr. SPEAKER.—Order, Order. When I am on my legs members must not stand up. I am not allowing any body to speak. The question is :

" That leave be granted to introduce the Mysore Ministers' Salaries and Allowances (Amendment) Bill, 1967,"

Those that are in favour will say ' Aye '

Those that are against will say 'No' I think Ayes have it.

Sri B. BHASKAR SHETTY (KAUP).—I press for a division.

The quorum bell was riung for two minutes.

Mr. SPEAKER.—The question is :

" That Leave be granted to introduce the Mysore Ministers' Salaries and allowances (Amendment) Bill, 1967,"

The motion put, the House divided.

Those that are in favour will say " Aye ".

Ayes :	...	80
Nos :	...	44

The Motion was adopted